2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚಿಕ್ಕೋಡಿ

CC No.:-61/2022

C.W.:-2

P.W.:-2

| | |
|---|---|
| ಸಾಕ್ಷಿದಾರನ ಹೆಸರು | ನಿಂಗಪ್ಪ ಕುರಬರ |
| ತಂದೆಯ ಹೆಸರು | ರಾಯಪ್ಪ |
| ವಯಸ್ಸು | 39 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ಹಂಡ್ಯಾನವಾಡಿ |

ಸಾಕ್ಷಿಗೆ ಈ ದಿನ ದಿಃ 10-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾ ಸಾ 1 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ 4 ಮತ್ತು 5 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ಮಾಹಿತಿ ಇರುತ್ತದೆ.

ದಿಃ30.11.2021 ರಂದು ನನಗೆ ಪೊಲೀಸರು ಜಾಗದ ಪಂಚನಾಮೆ ಮಾಡಲು ನೋಟೀಸು ನೀಡಿ ಕರೆದಿರುತ್ತಾರೆ. ನೋಟೀಸು ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ3 ಮತ್ತು ಸಾಕ್ಷಿ ಸಹಿಯನ್ನು ನಿಪಿ3ಎ ಎಂದು ಗುರುತಿಸಲಾಯಿತು. ನಂತರ ಜಾಗದ ಬಗ್ಗೆ ನಾನು, ಚಾಸಾ 3 ಮತ್ತು ಚಾಸಾ 1 ರವರು ಸೇರಿ ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ. ಘಟನಾ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ಗಂಟೆ ವರೆಗೆ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ4 ಮತ್ತು ಸಾಕ್ಷಿ ಸಹಿಯನ್ನು ನಿಪಿ4ಎ ಎಂದು

ಗುರುತಿಸಲಾಯಿತು. ಪಂಚನಾಮೆ ಜರುಗಿಸಿದ ನಂತರ ಪೊಲೀಸರು ಒಂದು ಭಾವ ಚಿತ್ರ ತೆಗೆದಿರುತ್ತಾರೆ. ಸದರಿ ಭಾವ ಚಿತ್ರದಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಎ ಎಚ್ ಪರ ಶ್ರೀ ಎಸ್ ಡಿ ವಿ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಯಾವುದೇ ಸಮಂಜಸ ಕಾರಣ ಇರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

C/C2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚಿಕ್ಕೋಡಿ

CC No.:-61/2022

C.W.:-3

P.W.:-3

| | |
|---|---|
| ಸಾಕ್ಷಿದಾರನ ಹೆಸರು | ಲಕ್ಷ್ಮಣ ಮದ್ದೆಣ್ಣವರ |
| ತಂದೆಯ ಹೆಸರು | ದುಂಡಪ್ಪ |
| ವಯಸ್ಸು | 60 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ಹಂಡ್ಯಾನವಾಡಿ |

ಸಾಕ್ಷಿಗೆ ಈ ದಿನ ದಿಃ 10-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾ ಸಾ 1 ಮತ್ತು 2, 4 ಮತ್ತು 5 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ಮಾಹಿತಿ ಇರುತ್ತದೆ.

ಸುಮಾರು 4 ವರ್ಷಗಳ ಹಿಂದೆ ಜಾಗದ ಸಲುವಾಗಿ ಚಾಸಾ 1 ಮತ್ತು ಆರೋಪಿತರ ಮಧ್ಯೆ ಜಗಳ ಆಗಿರುತ್ತದೆ. ನಂತರ 2 ದಿನ ಬಳಿಕೆ ಪೊಲೀಸರು ನಮಗೆ ಪಂಚನಾಮೆಯ ಕಾಲಕ್ಕೆ ಪಂಚರಾಗಲು ನೋಟೀಸು ನೀಡಿರುತ್ತಾರೆ. ನೋಟೀಸ ಮೇಲೆ ನಾನು ನನ್ನ ಹೆಬ್ಬಟೆನ ಗುರುತು ಹಾಕಿರುತ್ತೇನೆ. ಸದರಿ ನೋಟೀಸ ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ನಾನು, ಚಾಸಾ 1,2 ಮತ್ತು ಪೊಲೀಸರು ಇದ್ದರು. ಚಾಸಾ 1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ಬೆಳಗ್ಗೆ 9.30 ರಿಂದ 10.30 ವರೆಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆ ಮೇಲೆ ಇರುವ ತನ್ನ ಹೆಬ್ಬಟ್ಟಿನ ಗುರುತು ನೋಡಿ ಗುರುತಿಸುತ್ತಾರೆ. ಸದರಿ ಪಂಚನಾಮೆ ಈಗಾಗಲೆ ನಿಪಿ4 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ಭಾವ ಚಿತ್ರ ತೆಗೆದಿರುತ್ತಾರೆ ಅದರಲ್ಲಿ ಸಾಕ್ಷಿಯು

ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು ಸದರಿ ಭಾವ ಚಿತ್ರ ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಘಟನಾ ಸ್ಥಳ ಸರ್ವೆ ನಂಬರ ನೆನಪಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ  ಸಸಅ ರವರಿಂದಃ**

ಸರ್ವೆ ನಂಬರ 219/3 ರಲ್ಲಿ ಚಾಸಾ 1 ಮತ್ತು ಆರೋಪಿತರ ಮಧ್ಯೆ ಜಗಳ ಆಗಿರುತ್ತದೆ ಎಂದು ದಿಃ30.11.2021 ರಂದು ಪೊಲೀಸರು ನಮ್ಮನ್ನು ನಿಪಿ3 ರಂತೆ ಪಂಚರಾಗಲು ಕರೆದಿರುತ್ತಾರೆ ಎಂದರೆ ಸರಿ. ನಾವು ಪಂಚರಾಗಲು ಒಪ್ಪಿರುತ್ತೇವೆ ಎಂದರೆ ಸರಿ. ಅದೇ ದಿನ ಚಾಸಾ 1, 2 ಮತ್ತು ನನ್ನ ಸಮಕ್ಷಮ ಘಟನಾ ಸ್ಥಳದಲ್ಲಿ ನಿ ಪಿ4 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ 2 ರವರು ಪಂಚನಾಮೆಯನ್ನು ಜರುಗಿಸಲು ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸರಿ. ನಿಪಿ4 ತಯಾರು ಮಾಡಿದ ನಂತರ ಪೊಲೀಸರು ನಮಗೆ ಓದಿ ಹೇಳಿದ ನಂತರ ನಾನು ಹೆಬ್ಬಟಿನ ಗುರುತು ಹಾಕಿರುತ್ತೇನೆ ಮತ್ತು ಚಾಸಾ 2 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ  ಆರೋಪಿತರ ಪರ ಶ್ರೀ ಬಿ ಎ ಎಚ್ ಪರ ಶ್ರೀ ಎಸ್ ಡಿ ವಿ  ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು  ಮಾಡಲು ಕಾಲವಕಾಶ ಕೋರಿದ್ದು, ಯಾವುದೇ ಸಮಂಜಸ ಕಾರಣ ಇರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

C/C2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಕ್ಕೋಡಿ